ಶ್ರೀ ಕೆ. ಮಲ್ಲಪ್ಪ.—ಸಾಮಾನ್ಯವಾಗಿ advice ಕೊಟ್ಟಿಲ್ಲ. ಹೊಸದಾಗಿ ಈಗತಾನೇ ರಚನೆಯಾಗಿದೆ. ಈಗ ಎಲ್ಲಿ ಮಾಡಬೇಕೆಂಬ ಆಲೋಚನೆ ಸಾಮಾನ್ಯವಾಗಿ ಸರ್ಕಾರಕ್ಕೂ ಇದೆ, ಸದಸ್ಯರಿಗೂ ಇದೆ.

ಶ್ರೀ ಎಸ್. ಗೋಪಾಲಗೌಡ.—ಈ ಜೋರ್ಡಿಗೆ ಕೇಂದ್ರದವರು ಏನಾದರೂ ಹಣ ಸಹಾಯ ಮಾಡಿದ್ದಾರೆಯೇ ?

ಶ್ರೀ ಕೆ. ಮಲ್ಲಪ್ಪ.—ಬರುತ್ತಿದೆ. ಕೆಲವು ಸ್ಕೀಮುಗಳಿಗೆ ಶೇಕಡ 75ರಷ್ಟು, ಕೆಲವಕ್ಕೆ ಶೇಕಡ 50ರಷ್ಟು ಕೇಂದ್ರದಿಂದ ಸಹಾಯ ಬರುತ್ತಿದೆ.

ಶ್ರೀ ಎಂ. ಸಿ. ಬಸಪ್ಪ.—ಹೊರದೇಶದಿಂದ ಬರುವ ಸಾಮಾನುಗಳನ್ನು ಬಿಟ್ಟು ಸ್ಥಳೀಯ ಕಚ್ಚಾ ಸಾಮಾನುಗಳನ್ನು ಉಪಯೋಗಿಸಿಕೊಂಡು ಕೈಗಾರಿಕೆ ನಡಸುವವರಿಗೆ ಯಾವ ರೀತಿ ಸಹಾಯ ಮಾಡುತ್ತೀರಿ ?

ಶ್ರೀ ಕೆ. ಮಲ್ಲಪ್ಪ.—ಸರ್ಕಾರ ಸಹಕಾರ ಸಂಘಗಳನ್ನು ಏರ್ಪಾಡು ಮಾಡಿ ಅವುಗಳ ಮೂಲಕ ಈ ಕೈಗಾರಿಕೆ ನಡೆಸತಕ್ಕಂಥವರಿಗೆ ಸಾಲ ಒದಗಿಸುತ್ತಾರೆ; ಅವರಿಗೆ ಬೇಕಾದಂಥ ಕಚ್ಚಾ ಸಾಮಾನುಗಳನ್ನು ಒದಗಿಸಿ ಕೊಡುತ್ತಾರೆ. ಮಾರಾಟ ಮಾಡುವುದಕ್ಕೆ Marketing Society ಸ್ಕೀಮ್ ಕಾರ್ಯವನ್ನು ಒದಗಿಸುತ್ತಾ ಇದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಕೈಗಾರಿಕೆಯಲ್ಲಿ ಎಷ್ಟು ಜನಕ್ಕೆ ಉದ್ಯೋಗ ಕಲಸಿದ್ದೀರಿ ? ಈ ಸಲಹಾಸಮಿತಿಯಲ್ಲಿ ತೆಂಗು ಬೆಳೆಯುವ ಜಾಗದಲ್ಲಿರತಕ್ಕಂಥ ಜನಗಳನ್ನು ಹಾಕಿದ್ದೀರಾ, ಅಥವಾ ಜೆಕ್ನಿಕಲ್ ಪ್ಲಾನ ತರಬೇಕೆಂದು ಇಂಥಿಂಥದ್ದನ್ನು ಓದಿದವರನ್ನು ಅಪಾಯಿಂಟ್ ಮಾಡಿದ್ದೀರಾ ?

ಶ್ರೀ ಕೆ. ಮಲ್ಲಪ್ಪ.—ಮೊದಲೇ ತಿಳಿಸಿದ ಹಾಗೆ ಈ ಕೈಗಾರಿಕೆ ಅಷ್ಟೊಂದು ಬೆಳೆದಿಲ್ಲ. ತಿರುವಾಂಕೂರಿನಲ್ಲಿ ಎಷ್ಟರ ಮಟ್ಟಿಗೆ ಬೆಳೆದಿದೆಯೋ, ಅಷ್ಟರ ಮಟ್ಟಿಗೆ ನಮ್ಮ ರಾಜ್ಯದಲ್ಲಿ ಬೆಳೆದಿಲ್ಲ. ಇದನ್ನು ಬೆಳೆಸಬೇಕಾಗಿದೆ. ಉದ್ಯೋಗ ಒದಗಿಸಬೇಕೆಂಬ ದೃಷ್ಟಿಯಿಂದ ಒಂದು ಸಮಿತಿ ರಚನೆ ಮಾಡಿದೆ. ಅವರು ಅನೇಕ ಸಮಸ್ಯೆಗಳ ಬಗ್ಗೆ ವಿಚಾರ ನಡೆಸುತ್ತಾ ಇದ್ದಾರೆ. ಇದರಲ್ಲ ಸಾಮಾನ್ಯವಾಗಿ, Mysore District, Bangalore District, Tumkur District, Hassan District, Chitradurg, South Kanara and North Kanara Districtಗಳಲ್ಲಿ ವಿಶೇಷವಾಗಿ ತೆಂಗಿನ ಬೆಳೆಯಾಗುತ್ತದೆ. ಇಲ್ಲಿ ಕಚ್ಚಾ ಸಾಮಾನು ವಿಶೇಷವಾಗಿ ಸಿಗುತ್ತದೆ. ಈ ಸ್ಥಳಗಳಲ್ಲಿ ಕೈಗಾರಿಕೆಯನ್ನು ನಡೆಸಿದರೆ ಅದರಿಂದ ಪ್ರಯೋಜನವಾಗುತ್ತದೆಂದು ತಿಳಿದುಕೊಂಡು ಈ ಡಿಸ್ಟ್ರಿಕ್ಟುಗಳಿಂದ ಬರತಕ್ಕಂಥ ಸದಸ್ಯರನ್ನು ಈ ಸಮಿತಿಗೆ ನಾಮಕರಣ ಮಾಡಿದ್ದೇವೆ.

Representation to Harijans and Girijans in all the Committees constituted by the Government.

*Q**.—512. **Sri R. KENCHAPPA** (Pavagada).—

Will the Government be pleased to state:—

(*a*) whether they have issued a Government Order to the effect that at least one or two persons from amongst Harijans and Girijans must be represented on all the Committees of the Government to be constituted at Taluk, District and State levels together with the date of issue the said Government Order ;

(*b*) the number of Committees constituted since the issue of the above Government Order ?

A.—**Sri S. NIJALINGAPPA** (Chief Minister).—

(*a*) Though there is no such order, the policy of Government is to give fair representation, as far as possible, to Harijans and Girijans provided suitable persons are available and there are no difficulties in the way.

(*b*) Does not arise.

ಶ್ರೀ ಆರ್. ಕೆಂಚಪ್ಪ. ಪ್ರಾತಿನಿಧ್ಯ ಕೊಡಬೇಕಾದರೆ ಇರಬೇಕಾದ ಅರ್ಹತೆಗಳೇನು ?

†ಶ್ರೀ ಎಸ್. ನಿಜಲಿಂಗಪ್ಪ.—ಯಾವ ಯಾವ ಕೆಲಸಕ್ಕೆ ಯಾರ್ಯಾರು ಯೋಗ್ಯರೋ, ಅವರೇ ಅರ್ಹರು.

ಶ್ರೀ ಆರ್. ಕೆಂಚಪ್ಪ.—ನೇಮಕ ಮಾಡುವುದಕ್ಕೆ ಯಾವ ಅಡ್ಡಿ ಆತಂಕಗಳೂ ಇರಕೂಡದು ಎಂದು ಹೇಳಿದ್ದೀರಿ. ಆತಂಕಗಳು ಎಂದರೆ ಏನು ಎಂದು ವಿವರಣೆ ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲಿದೆ ಆತಂಕ ? ಯೋಗ್ಯರು ಇದ್ದರೆ ನೇಮಕ ಮಾಡುತ್ತೇವೆ. ಯಾರೂ ಇಲ್ಲದೆ ಹೋದರೆ ಆತಂಕವಾಗುತ್ತದೆ.

ಶ್ರೀ ಆರ್. ಕೆಂಚಪ್ಪ.—ಯೋಗ್ಯರೆಂದು ಪರಿಗಣಿಸಬೇಕಾದರೆ ಅವರಿಗೆ ನಿರ್ದಿಷ್ಟ ಅರ್ಹತೆಗಳೇನಿರಬೇಕು ?

ಶ್ರೀ ಎಸ್. ನಿಜಲಿಂಗಪ್ಪ.—ಬುದ್ಧಿವಂತರಾಗಿರಬೇಕು, ವಿದ್ಯಾವಂತರಾಗಿರಬೇಕು, ವಿಚಾರಗಳನ್ನು ತಿಳಿದುಕೊಂಡಿರಬೇಕು, ಸಾಕಷ್ಟು ಪ್ರತಿಭಾವಂತರೂ ಆಗಿರಬೇಕು.

Improvements to Bharamasagara Major tank in Chitradurga Taluk.

*Q. —555. Sri M. N. KRISHNASINGH (Jagalur).—

Will the Government be pleased to state.—

(*a*) whether estimates have been prepared for the improvements of Bharamasagara Major Tank in Chitradurga Taluk ;

(*b*) if so, the reasons as to why the work has not been carried out as per the estimate made ;

(*c*) whether they will take steps to commence the works at least now ?

A.—Sri ALUR HANUMANTHAPPA (Deputy Minister for Minor Irrigation).—

(*a*) No.

(*b*) Does not arise in view of reply to clause (*a*)

(*c*) Do do

ಶ್ರೀ ಎಂ. ಎನ್. ಕೃಷ್ಣಸಿಂಗ್.—ಅಂದಾಜು ತಯಾರಿಸಿಲ್ಲ ಎಂದು ಹೇಳಿದ್ದೀರಿ. ಮೊನ್ನೆ ಭಾರಿ ಮಳೆ ಬಂದು, ಏರೀ ಮೇರೆ ನೀರು ವಿಪರೀತವಾಗಿ ಹರಿದು ಸ್ಥಳದ ಅಧಿಕಾರಿಗಳು ಧಾವಿಸಿ, ಹಿಂದಿರುವ ಹಳ್ಳಿಗಳಿಗೆ ನೀರು ನುಗ್ಗದಂತೆ ನೋಡಿಕೊಂಡದ್ದು ತಮ್ಮ ಗಮನಕ್ಕೆ ಬಂದಿದೆಯೇ ?

†ಶ್ರೀ ಆಲೂರು ಹನುಮಂತಪ್ಪ.—Detailed estimate ತಯಾರಾಗಿಲ್ಲ. ಆದರೆ ಏರಿ raise ಮಾಡಬೇಕೆಂದು instructions ಕೊಟ್ಟಿದೆ. ತೂಬು ಜಖಂ ಆಗಿರುವುದನ್ನು ಸರಿ ಮಾಡಲು 1930 ರೂಪಾಯಿ ಅಂದಾಜು ಮಾಡಿದೆ. Ageney ಸಹ fix ಮಾಡುವುದರಲ್ಲಿ ಇದೆ. ಕೆಲಸ ತೆಗೆದುಕೊಳ್ಳುವಂತೆ ಮಾಡುತ್ತೇವೆ.

ಶ್ರೀ ಎಂ. ಎನ್. ಕೃಷ್ಣಸಿಂಗ್.— ಕೆಲಸ ತೆಗೆದುಕೊಳ್ಳಲು ಯಾವ ಕ್ರಮ ತೆಗೆದುಕೊಂಡಿದ್ದೀರಾ

ಶ್ರೀ ಆಲೂರು ಹನುಮಂತಪ್ಪ.— Agency fix ಮಾಡುವ stageನಲ್ಲಿ ಇದೆ.

ಶ್ರೀ ವಿ. ಮುನಿಯಪ್ಪ.—ಮುಂದಿನ ಮಳೆ ಬಂದು ಆ ಕೆರೆ ಅಪಾಯಕ್ಕೆ ಈಡಾಗುವರೊಳಗೆ ಈ ಬೇಸಿಗೆಯಲ್ಲಿಯೇ ಕಾಂಗಾರಿ ಪೂರೈಸುತ್ತಿಲ್ಲ.

ಶ್ರೀ ಆಲೂರು ಹನುಮಂತಪ್ಪ.—ಹೌದು, ಹೌದು ಅಂಥ ಕೆಲಸಗಳನ್ನು ಆದಷ್ಟು ಛೇಗ execute ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣಸಿಂಗ್.—ಮತ್ತೆ ಅಂದಾಜಿಲ್ಲ ಅಂತ ಹೇಳಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಇದು Detailed estimates ಅಲ್ಲ. Damaged ವೇಸ್ಟ್ ವೇರ್‌ಗೆ, ಸ್ಲೂಸಿಗೆ 2,400 ರೂಪಾಯಿ ಹಾಕಿ ನೀರು ನಿಲ್ಲಿಸಬೇಕೆಂದು ಹೇಳಿದ್ದೇವೆ. ಹಾಗೆಯೇ quard stageಗಳನ್ನು ಹಾಕುವುದಕ್ಕೆ 2,550 ರೂಪಾಯಿ ತಗಲುವುದಿದೆ,